KAHV700000752018

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಶಿಗ್ಗಾಂವ

ಉಪಸ್ಥಿತರುಃ- ಅಶ್ವಿನಿಚಂದ್ರಕಾಂತ್

ಬಿ.ಎಸ್.ಸಿ., ಎಲ್.ಎಲ್.ಬಿ.

ಪ್ರ.ದ.ನ್ಯಾದಂ., ಶಿಗ್ಗಾಂವ

ದಿನಾಂಕ 18 ನೇ ಜುಲೈ - 2026

ಸಿ.ಸಿ.ನಂ.35/2018

ಫಿರ್ಯಾಧಿದಾರರು : ಕರ್ನಾಟಕ ರಾಜ್ಯ, ಬಂಕಾಪುರ ಪೋಲಿಸ್ ಠಾಣೆ,
ಬಂಕಾಪುರ.

(ಪ್ರತಿನಿಧಿಸುವವರು ಸಹಾಯಕ ಸರ್ಕಾರಿ
ಅಭಿಯೋಜಕರು).

ವಿರುದ್ಧ

ಆರೋಪಿತರುಃ ಮಂಜುನಾಥ ಈಶ್ವರ ಹಾನಗಲ್,
ವಯಾಃ 44 ವರ್ಷ, ಉದ್ಯೋಗಃ ಶೇತ್ಕಿ
ಸಾಃ ಕುಂದೂರ, ತಾಃ ಶಿಗ್ಗಾಂವ, ಜಿಃ ಹಾವೇರಿ.

(ಪ್ರತಿನಿಧಿಸುವವರು ಶ್ರೀ.ಎಮ್.ಆರ್.ಕೆ., ಆರೋಪಿ ವಕೀಲರು)

| | | |
|---|---|---|
| 1) ಅಪರಾಧ ಘಟಿಸಿದ ದಿನಾಂಕ | | 12.12.2017 |
| 2) ಅಪರಾಧ ವರದಿಯ ದಿನಾಂಕ | | 12.12.2017 |
| 3) ಫಿರ್ಯಾಧಿದಾರನ ಹೆಸರು | | ಚಂದ್ರಶೇಖರಪ್ಪ ಬಸವಣ್ಣೆಪ್ಪ ಮೆಳ್ಳಾಗಟ್ಟಿ |
| 4) ಆರೋಪಿತನ ದಸ್ತಗಿರಿಯಾದ ದಿನಾಂಕ | | -- |
| 5) ಆರೋಪಿತರ ಜಾಮೀನು ದಿನಾಂಕ | | -- |
| 6) ಸಾಕ್ಷ್ಯದ ಅಭೀಲೇಖ ಪ್ರಾರಂಭದ ದಿನಾಂಕ | | 26.08.2022 |
| 7) ಸಾಕ್ಷ್ಯ ಅಭೀಲೇಖ ಮುಕ್ತಾಯದ ದಿನಾಂಕ | | 07.05.2026 |
| 8) ಆರೋಪಿಸಲಾದ ಅಪರಾಧಗಳು | | ಭಾರತ ದಂಡ ಸಂಹಿತೆ ಕಲಂಃ 324, 354, 447, 504 ಮತ್ತು 506. |
| 9) ನ್ಯಾಯಾಲಯದ ಅಭಿಪ್ರಾಯ | | ಅಂತಿಮ ಆದೇಶದಂತೆ |

ತೀರ್ಪು

ಈ ಪ್ರಕರಣವನ್ನು ಎ.ಎಸ್.ಐ. ಬಂಕಾಪುರ ಪೋಲಿಸರು ಆರೋಪಿತನ ವಿರುದ್ಧ ಭಾರತ ದಂಡ ಸಂಹಿತೆ ಕಲಂಃ 324, 354, 447, 504 ಮತ್ತು 506 ರ ಅಡಿಯಲ್ಲಿ ಈ ದೋಷಾರೋಪಣ ಪತ್ರವನ್ನು ಸಲ್ಲಿಸಲಾಗಿದೆ.

2. ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆಃ

ಬಂಕಾಪುರ ಪೋಲೀಸ್ ಠಾಣೆ ವ್ಯಾಪ್ತಿ ಕುಂದೂರ ಗ್ರಾಮದ ಆರೋಪಿತನು ದಿನಾಂಕಃ 12.12.2017 ರಂದು ಸಂಜೆ ಸುಮಾರು 06.30 ಗಂಟೆಗೆ ಏಕಾಏಕಿ ಪಿರ್ಯಾದುದಾರರ ಜಮೀನ ರಿ.ಸ.ನಂ.20 ನೇದ್ದರಲ್ಲಿರುವ ಮನೆಯ ಹಿತ್ತಲದಲ್ಲಿ ಅತೀಕ್ರಮ ಪ್ರವೇಶ ಮಾಡಿ ಬಂದು ಪಿರ್ಯಾದುದಾರರ ಮಗಳಾದ ಚಾಸಾ.4 ರವರು ಮಹಿಳೆ ಅಂತಾ ತಿಳಿದು ತಿಳಿದೂ ಅವಳಿಗೆ ಗ್ವಾರೆಯಿಂದ ತಲೆಗೆ ಹೊಡೆದು ಸಾದಾ ಸ್ವರೂಪದ ಗಾಯ ಪಡಿಸಿದ್ದಲ್ಲದೆ, ಅಲ್ಲೆ ಇದ್ದ ಪಿರ್ಯಾದುದಾರ ಆರೋಪಿತನಿಗೆ ಯಾಕಪ್ ನನ್ನ ಮಗಳಿಗೆ ಹೊಡೆದಿ ಅವಳು ನಿನಗೆ ಏನ್ ಮಾಡಿದ್ಲು ಅಂತಾ ಕೇಳಿದಾಗ ಆರೋಪಿತನು ಏನಲೇ ಹಾದರಗಿತ್ತಿ ಮಗನ ನಿಂಗು ಒಂದು ಗತಿ

ಕಾಣಿಸಿ ಬಿಡ್ತಿನಿ ಅಂತಾ ಅವಾಚ್ಯವಾಗಿ ಬೈದವನೇ, ಅದೇ ಗ್ವಾರೆಯಿಂದ ಪಿರ್ಯಾದಿಯ ತಲೆಗೆ ಹೊಡೆದು ಸಾದಾ ಸ್ವರೂಪದ ಗಾಯ ಪಡಿಸಿರುತ್ತಾನೆ ಹಾಗೂ ಉಳಕೊಂಡ್ರಿ ಬೋಸುಡಿಮಕ್ಕಳ ಇನ್ನೊಮ್ಮೆ ಸಿಕ್ಕರೆ ನಿಮ್ಮನ್ನು ಕೊಂದ ಹಾಕ್ತಿನಿ ಅಂತಾ ಜೀವದ ಬೆದರಿಕೆ ಹಾಕಿದ ಅಪರಾಧ ಆರೋಪಿತನ ವಿರುದ್ಧ ಫಿರ್ಯಾಧಿ ಇರುತ್ತದೆ.

3. ಚಾಸಾ-1 ರವರು ಸಲ್ಲಿಸಿದ ಪ್ರಥಮ ಮಾಹಿತಿ ಮೇರೆಗೆ ಬಂಕಾಪುರ ಪೋಲಿಸ್ ಠಾಣೆಯವರು ಅಫರಾದ ಸಂಖ್ಯೆ 204/2017 ರಂತೆ ಪ್ರಕರಣವನ್ನು ದಾಖಲಿಸಿರುತ್ತಾರೆ.

4. ಚಾಸಾ-13 ರವರು ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ ದೋಷಾರೋಪಣಾ ಪತ್ರವನ್ನು ನ್ಯಾಯಲಯಕ್ಕೆ ಸಲ್ಲಿಸಿರುತ್ತಾರೆ.

5. ದೋಷಾರೋಪಣೆಯನ್ನು ಸಲ್ಲಿಸಿದ ನಂತರ ಈ ನ್ಯಾಯಾಲಯದಿಂದ ಆರೋಪಿತರ ವಿರುದ್ಧ ಅಪರಾಧಗಳ ಬಗ್ಗೆ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು.

6. ಆರೋಪಿತರು ಜಾಮೀನಿನ ಮೇಲೆ ಇರುತ್ತಾರೆ. ನಂತರ ಆರೋಪಿತರಿಗೆ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 207 ರ ಪ್ರಕಾರ ಅಭಿಯೋಜನೆ ಪ್ರಕರಣದ ದಾಖಲೆಗಳ ನಕಲುಗಳನ್ನು ನೀಡಲಾಯಿತು.

7. ದೋಷಾರೋಪಣೆಯನ್ನು ರಚಿಸುವ ಮುನ್ನ ಅಭಿಯೋಜನೆ ಮತ್ತು ಆರೋಪಿತರ ಅಹವಾಲುಗಳನ್ನು ಕೇಳಿದ ನಂತರ ಆರೋಪಿತರ ಮೇಲೆ ಮಾಡಲಾದ ಆರೋಪಗಳು ನಿರಾಧಾರ ಎಂದು ಕಂಡು ಬರದೇ ಇರುವುದರಿಂದ ಮೇಲ್ಕಂಡ ಅಪಾದನೆಗಾಗಿ ದೋಷಾರೋಪಣೆಯನ್ನು ರಚಿಸಿ, ಓದಿ, ಹೇಳಿ ವಿವರಿಸಲಾಯಿತು. ಆರೋಪಿತರು ತಮ್ಮ ವಿರುದ್ಧ ಮಾಡಲಾದ ಆರೋಪಗಳನ್ನು ಅಲ್ಲಗಳೆದು ತಾವು ಯಾವುದೇ ತಪ್ಪು ಮಾಡಿರುವುದಿಲ್ಲ ಎಂದು ಹೇಳಿ ವಿಚಾರಣೆಯಾಗಲು ವಿನಂತಿಸಿರುತ್ತಾರೆ. ನ್ಯಾಯಲಯದಿಂದ ಸಾಕಷ್ಟು ಬಾರಿ ಸಮನ್ಸ್ ಜಾರಿಯಾದರು ಸಹ ಚಾಸಾ.11 ರಿಂದ ಚಾಸಾ.13 ರವರು ಹಾಜರಾಗಿ ಸಾಕ್ಷಿ ನುಡಿಯುವಲ್ಲಿ ವಿಫಲರಾಗಿರುತ್ತಾರೆ.

8. ಅಭಿಯೋಜನೆಯು ತನ್ನ ಪ್ರಕರಣವನ್ನು ಸಾಭೀತುಪಡಿಸಲು ಏಳು ಸಾಕ್ಷಿದಾರರನ್ನು ಅಂದರೆ ಫ್ರಾಸಾ-1 ರಿಂದ ಫ್ರಾಸಾ-9 ರವರನ್ನು ವಿಚಾರಿಸಿಕೊಂಡಿದೆ ಮತ್ತು ದಾಖಲಾತಿಗಳನ್ನು ನಿಪಿ-1 ರಿಂದ ನಿಪಿ-6 ಹಾಗೂ ಮು.ಮಾ.1 ಎಂದು ಗುರುತಿಸಿಕೊಂಡಿರುತ್ತವೆ.

9. ಅಭಿಯೋಜನೆ ಸಾಕ್ಷ್ಯ ಮುಕ್ತಾಯದ ನಂತರ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 (1) (ಬಿ) ರಡಿಯಲ್ಲಿ ಆರೋಪಿತರ ವಿರುದ್ಧ ಲಭ್ಯವಿದ್ಧ ಅಭಿಯೋಜನಾ ಸಾಕ್ಷ್ಯವನ್ನು ಪ್ರಶ್ನಿಸಿ ಅವರ ಉತ್ತರಗಳನ್ನು ದಾಖಲಿಸಿಕೊಳ್ಳಲಾಯಿತು. ಆರೋಪಿತರು ತಮ್ಮ ಪರವಾಗಿ ಯಾವುದೇ ಪ್ರತಿರಕ್ಷಣಾ ಸಾಕ್ಷ್ಯವನ್ನು ಹಾಜರು ಪಡಿಸಿರುವುದಿಲ್ಲ.

10. ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರ ಹಾಗೂ ಮಾನ್ಯ ಆರೋಪಿತನ ಪರ ವಕೀಲರ ವಾದ-ವಿವಾದಗಳನ್ನು ಕೇಳಲಾಯಿತು. ಕಡತದಲ್ಲಿ ಲಭ್ಯವಿದ್ಧ ದಾಖಲಾತಿಗಳನ್ನು ಮತ್ತು ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಯಿತು.

11. ಮೇಲ್ಕಂಡ ಕಾರಣಗಳಿಂದ ಈ ಕೆಳಗಿನ ಅಂಶಗಳು ನನ್ನ ಪರ್ಯಾಲೋಚನೆಗೆ ಉದ್ಭವಿಸುತ್ತವೆಃ

<u>ಅಂಶಗಳು</u>

| | |
|---|---|
| 1. | ಶಿಗ್ಗಾಂವ ವ್ಯಾಪ್ತಿ ಬಂಕಾಪುರ ಪೋಲಿಸ ಠಾಣಾ ವ್ಯಾಪ್ತಿಯ ಕುಂದುರ ಗ್ರಾಮದ ಆರೋಪಿತನು ದಿನಾಂಕಃ 12.12.2017 ರಂದು ಸಂಜೆ 06.30 ಗಂಟೆಗೆ ಏಕಾಏಕಿ |

| | |
|---|---|
| | ಪಿರ್ಯಾದಿದಾರರ ಜಮೀನ ರಿ.ಸ.ನಂ.20 ನೇದ್ದರಲ್ಲಿರುವ ಮನೆಯ ಹಿತ್ತಲದಲ್ಲಿ ಅತೀಕ್ರಮ ಪ್ರವೇಶ ಮಾಡಿ ಬಂದು ಪಿರ್ಯಾದಿದಾರರ ಮಗಳಾದ ಚಾಸಾ.4 ರವರು ಮಹಿಳೆ ಅಂತಾ ತಿಳಿದು ತಿಳಿದೂ ಅವಳಿಗೆ ಮತ್ತು ಪಿರ್ಯಾದಿಯ ತಲೆಗೆ ಗ್ವಾರೆಯಿಂದ ತಲೆಗೆ ಹೊಡೆದು ಸಾದಾ ಸ್ವರೂಪದ ಗಾಯ ಪಡಿಸಿದ್ದಾನೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ ? |
| 2. | ಎರಡನೇಯದಾಗಿ, ಮೇಲ್ಕಂಡ ದಿನ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತನು ಪಿರ್ಯಾದಿಯ ಮಗಳು ಚಾಸಾ.4 ಮಹಿಳೆ ಅಂತಾ ಗೊತ್ತಿದ್ದೂ ಕೈಯಿಂದ ಹಿಡಿದು ಎಳೆದಾಡಿ ಸಾರ್ವಜನಿಕವಾಗಿ ಅವಮಾನ ಪಡಿಸಿದ್ದಾನೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ ? |
| 3. | ಮೂರನೇಯದಾಗಿ, ಮೇಲ್ಕಂಡ ದಿನ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತನು ಪಿರ್ಯಾದಿಯ ಜಮೀನಿಗೆ ಅತಿಕ್ರಮಣ ಪ್ರವೇಶ ಮಾಡಿದ್ದಾನೆಂದು |

| | |
|---|---|
| | ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ? |
| 4. | ನಾಲ್ಕನೇಯದಾಗಿ, ಮೇಲ್ಕಂಡ ದಿನ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತನು ಪಿರ್ಯಾದಿದಾರರು ಯಾಕಪ್ಪ ನನ್ನ ಮಗಳಿಗೆ ಹೊಡೆದಿ ಅವಳು ನಿನಗೆ ಏನ್ ಮಾಡಿದ್ಲು ಅಂತಾ ಕೇಳಿದಾಗ ಆರೋಪಿತನು ಪಿರ್ಯಾದಿಗೆ ಏನಲೇ ಹಾದರಗತ್ತಿ ಮಗನ ನಿಂಗು ಒಂದು ಗತಿ ಕಾಣಿಸಿ ಬಿಡ್ತಿನಿ ಅಂತಾ ಅವಾಚ್ಯವಾಗಿ ಬೈದಾಡಿದ್ದಾನೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ? |
| 5. | ಕೊನೇಯದಾಗಿ, ಮೇಲ್ಕಂಡ ದಿನ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತನು ಪಿರ್ಯಾದಿಗೆ ಉಳಕೊಂಡ್ರಿ ಬೋಸುಡಿಮಕ್ಕಳ ಇನ್ನೂಮ್ಮೆ ಸಿಕ್ಕರೆ ನಿಮ್ಮನ್ನು ಕೊಂದ ಹಾಕ್ತಿನಿ ಅಂತಾ ಜೀವದ ಬೆದರಿಕೆ ಹಾಕಿದ್ದಾನೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ? |
| 6. | ಏನು ಆದೇಶ? |

12. ಈ ಮೇಲಿನ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ನನ್ನ ಉತ್ತರಗಳು ಈ ಕೆಳಗಿನಂತೆ ಇರುತ್ತವೆ.

ಅಂಶ ನಂ.1 ರಿಂದ 5 : ನಕಾರಾತ್ಮಕವಾಗಿ.

ಅಂಶ ನಂ.6 : ಅಂತಿಮ ಆದೇಶದಂತೆ ಕೆಳಗಿನ ಕಾರಣಗಳಿಗಾಗಿಃ

-: <u>ಕಾರಣಗಳು</u> :-

13. ಅಂಶ ನಂ.1 ರಿಂದ 5:- ಅ) ಈ ಐದು ಅಂಶಗಳು ಪರಸ್ಪರ ಅಂತರ ಸಂಬಂದ ಹೊಂದಿರುವುದರಿಂದ ಇವೆಲ್ಲವನ್ನು ಜೊತೆಯಾಗಿ ಚರ್ಚಿಸಲು ತೆಗೆದುಕೊಳ್ಳಲಾಗಿದೆ.

ಬಿ) ದೊಷಾರೋಪಣ ಪಟ್ಟಿ ಪ್ರಕಾರ ಆರೋಪಿತನು ಭಾರತ ದಂಡ ಸಂಹಿತೆ 324, 354, 447, 504 ಮತ್ತು 506 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಎಸಗಿರುತ್ತಾರೆ. ಸದರಿ ಆರೋಪಗಳನ್ನು ರುಜುವಾತು ಪಡೆಸುವ ಹೊಣೆಗಾರಿಕೆಯು ಅಭಿಯೋಜಕರ ಮೇಲೆ ಇರುತ್ತದೆ. ಅವರು ತಮ್ಮ ಮೇಲೆ ಇರುವ ಹೊಣೆಗಾರಿಕೆಯನ್ನು ಯಾವ ರೀತಿ ರುಜುವಾತು ಪಡೆಸುತ್ತಾರೆ ಎಂಬುದನ್ನು

ಪರಿಶೀಲಸ ಬೇಕಾಗಿದೆ. ಫಿರ್ಯಾಧಿಯ ಅಂಶಗಳನ್ನು ಸಾಭೀತು ಪಡಿಸುವ ಸಲುವಾಗಿ ವಿಚಾರಣೆ ಮಾಡಿಕೊಂಡಿರುವ ಸಾಕ್ಷಿಗಳಲ್ಲಿ ಫ್ರಾಸಾ-1 ರವರು ದೂರುದಾರರಾಗಿ ಹಾಗೂ ಗಾಯಾಳು, ಫ್ರಾಸಾ-2 ರವರು ಘಟನಾ ಜಾಗೆಯ ಪಂಚರಾಗಿದ್ದು, ಫ್ರಾಸಾ-3 ರವರು ಪ್ರತ್ಯಕ್ಷದರ್ಶಿ ಮತ್ತು ಗಾಯಾಳು, ಫ್ರಾಸಾ-4 ರಿಂದ ಫ್ರಾಸಾ-9 ರವರು ಪ್ರತ್ಯಕ್ಷದರ್ಶಿಗಳಾಗಿದ್ದು ಇವರು ಸಾಕ್ಷಿದಾರರಾಗಿ ಗುರುತಿಸಿಕೊಂಡಿರುತ್ತಾರೆ.

ಸಿ) ಫ್ರಾಸಾ-1 ರವರು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯುತ್ತಾ, ದಿಃ 12.12.2017 ರಂದು ಸಾಯಂಕಾಲ 06.25 ಗಂಟೆ ಸುಮಾರಿಗೆ ತಾನು, ತನ್ನ ಹೆಂಡತಿ, ಮಕ್ಕಳಾದ ಕವಿತಾ, ಸವಿತಾ ಮತ್ತು ಈಶ್ವರ ಮನೆಯಲ್ಲಿ ಶೆಂಗಾ ಆರಿಸುತ್ತಿದ್ದೇವು. ಚಾಸಾ.4 ರವರಿಗೆ ತಾನು ದೀಪಾ ಹಚ್ಚಲು ಹೇಳಿದ್ದು, ತನ್ನ ಮಗಳು ಹೊರಗೆ ಬಂದು ಮುಖ ತೊಳೆಯುತ್ತಿದ್ದಳು. ಆಗ ಆರೋಪಿಯು ಬಂದು ಗ್ವಾರಿಯಿಂದ ಚಾಸಾ.4 ರವರಿಗೆ ತಲೆಗೆ ಹೊಡೆದಿದ್ದು, ಏಟು ಬಿದ್ದ ತಕ್ಷಣ ಅವರು ಚೀರಿಕೊಂಡರು, ಚಾಸಾ.5 ರವರು ಹೊರಗೆ ಹೋಗಿ ನೋಡಿದಾಗ ಆರೋಪಿಯು ಅವನಿಗೂ ಕೂಡ ಗ್ವಾರೆಯಿಂದ ಹೊಡೆಯಲು ಹೋದನು, ಚಾಸಾ.5 ರವರು

ಅಲ್ಲಿಂದ ಓಡಿ ಹೋದನು, ತಾನು ನೋಡಲು ಹೋದಾಗ ತನಗೂ ಕೂಡ ಆರೋಪಿಯು ಗ್ವಾರೆಯಿಂದ ತಲಗೆ ಹೊಡೆದಿದ್ದು ತನಗೆ ರಕ್ತ ಬರಲು ಶುರು ಆಯಿತು, ಚಾಸಾ.7 ರಿಂದ ಚಾಸಾ.9 ರವರು ಜಗಳ ಬಿಡಿಸಿದರು. ಆರೋಪಿಯು ತನಗೆ ಜೀವದ ಬೆದರಿಕೆ ಹಾಕಿದನು. ತಾನು ಮತ್ತು ತನ್ನ ಮಗಳು ಚಾಸಾ.4 ಬಂಕಾಪುರ ಆಸ್ಪತ್ರೆಗೆ ಹೋದೇವು, ಪೋಲಿಸ್ ಠಾಣೆಗೆ ದೂರನ್ನು ಕೊಡಲು ಹೋದೆವು, ತಾನು ಶಿವಾನಂದ ಅವರಿಂದ ಹೇಳಿ ಬರೆಸಿದೆ ಎಂದು ತಮ್ಮ ಸಾಕ್ಷ್ಯವನ್ನು ನುಡಿದಿರುತ್ತಾರೆ.

14. ಸದರಿ ಸಾಕ್ಷಿದಾರರನ್ನು ಪಾಟೀ ಸವಾಲಿಗೆ ಗುರಿಪಡಿಸಿದಾಗ ತಮ್ಮ ಪಾಟೀ ಸವಾಲಿನಲ್ಲಿ ಸರ್ವೇ ನಂ.20 ರಲ್ಲಿ ಆಪ್ಸತ್ ಆಗಿ ಮನೆ ಕಟ್ಟಿರುತ್ತೇವೆ. ಈ ಮೇಲೆ ಹೇಳಿರುವ ಜನರಲ್ಲಿ ಕೆಲವರು ನನ್ನ ಸಂಬಂಧಿಕರು ಇರುತ್ತಾರೆ. ನನ್ನ ಮನೆ ಇದೇ ಸರ್ವೇ ನಂಬರ್‌ನಲ್ಲಿ ಇರುತ್ತದೆ ಎಂದರೆ ಸರಿ. ಮೇಲೆ ಹೇಳಿರುವ ಜನರ ಮನೆಯು ಕೂಡ ಅದೇ ಸರ್ವೇ ನಂಬರ್ ನಲ್ಲಿ ಇರುತ್ತದೆ ಎಂದರೆ ಸರಿ. ಸದರಿ 25 ಜನರ ಹೆಸರು ಪಂಚಾಯತ ದಾಖಲೆಯಲ್ಲಿ ನಮೂದು ಆಗಿರುತ್ತದೆ ಎಂದರೆ ಸರಿ. ಈ ಪ್ರತಿಯೊಂದು ಜನರಿಗೆ ಪಂಚಾಯತ್ನಲ್ಲಿ ಪ್ರತ್ಯೇಕವಾಗಿ ನಂಬರ್ ಕೊಟ್ಟಿರುತ್ತಾರೆ

ಎಂದರೆ ಸರಿ. ನನ್ನ ಪಂಚಾಯತಿ ನಂಬರ್ ನನಗೆ ಸರಿಯಾಗಿ ಹೇಳಲು ಬರುವುದಿಲ್ಲ. ಆರೋಪಿಯ ಮನೆಯು ಸರ್ವೇ ನಂ.20 ರಲ್ಲಿ ಬರುತ್ತದೇ ಎಂದರೆ ಸರಿ. ಘಟನೆ ಆದ ಸಂದರ್ಭದಲ್ಲಿ ಸಾಕಷ್ಟು ಜನ ಇದ್ದರು ಎಂದರೆ ಸರಿ. ಸುಮಾರು 8-10 ಜನ ಬಂದಿರುತ್ತಾರೆ. ಮಾಂತೇಶಗೌಡ, ಸಿದ್ದಪ್ಪ, ಶಿವಪುತ್ರಪ್ಪ, ಪರಮೇಶಪ್ಪ ಮತ್ತು ಇತರರು ಬಂದಿದ್ದರು ಉಳಿದವರು ಹೆಸರು ಹೇಳಲು ಬರುವುದಿಲ್ಲ. 3 ಜನ ಸೇರಿ ಮೋಟಾರ ಸೈಕಲನಲ್ಲಿ ಬಂಕಾಪುರಕ್ಕೆ ಹೋದೇವು. ನಾನು, ಶಿವಾನಂದ ಮತ್ತು ಇನ್ನೊಬ್ಬರ ಹೆಸರು ಹೇಳಲು ಬರುವುದಿಲ್ಲ. ಮೋಟಾರ ಸೈಕಲ ನನ್ನ ಅಣ್ಣನದ್ದು. ಮೋಟಾರ ಸೈಕಲ ನಂಬರ ನೆನಪಿಲ್ಲ. ಸದರಿ ಘಟನೆ ನಡೆಯುವ ಪೂರ್ವದಲ್ಲಿ ನಾನು ಆರೋಪಿತರು ಅನೋನ್ಯವಾಗಿದ್ದೆವು ಎಂದರೆ ಸರಿ. ನನ್ನ ಹೆಂಡತಿ/ಚಾಸಾ.6, ಚಾಸಾ-7 ನನ್ನ ಅಣ್ಣ ಚಾಸಾ-9 ನನ್ನ ಅಳಿಯ, ಚಾಸಾ-10 ನನ್ನ ತಮ್ಮನ ಮಗ ಇರುತ್ತಾರೆ ಎಂದರೆ ಸರಿ. ಸದರಿ ಫ್ರಾಸಾ.1 ರವರ ಪಾಟೀ ಸವಾಲನ್ನು ಗಮನಿಸಿದಾಗ ಘಟನೆಯಾದ ಸಂದರ್ಭದಲ್ಲಿ ಸಾಕಷ್ಟು ಜನರಿದ್ದರು ಎಂದರೆ ಸರಿ ಎಂದು ನುಡಿದಿರುತ್ತಾರೆ. ಸದರಿ ಫ್ರಾಸಾ.1 ರವರು ತಮ್ಮ ಮುಖ್ಯ ವಿಚಾರಣೆ ಮತ್ತು ಪಾಟೀ ಸವಾಲಿನಲ್ಲಿ ವ್ಯತಿರಿಕ್ತ ಸಾಕ್ಷ ನುಡಿದಿದ್ದು ಅವರ ಸಾಕ್ಷಿಯನ್ನು ನಂಬಲು ಕಷ್ಟವಿರುತ್ತದೆ.

15. ಫ್ರಾಸಾ-2 ರವರು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯುತ್ತಾ, ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ತನಗೆ ಗೊತ್ತಿಲ್ಲ, ತಾನು ಪೋಲಿಸ ಠಾಣೆಗೆ ಹೋದಾಗ ಕೆಲವು ಕಾಗದಗಳ ಮೇಲೆ ತನ್ನ ಸಹಿ ಪಡೆದುಕೊಂಡಿದ್ದರು. ತನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿಲ್ಲ ಎಂದು ತಮ್ಮ ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿ ಸಾಕ್ಷಿದಾರರು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಸಹಾಯಕ ಸರ್ಕಾರಿ ಅಭಿಯೋಜಕರವರಿಗೆ ಪಾಟೀ ಸವಾಲಿಗೆ ಅನುಮತಿ ನೀಡಿದಾಗ ತಮ್ಮ ಪಾಟೀ ಸವಾಲಿನಲ್ಲಿ ತಮ್ಮ ಸಮಕ್ಷಮದಲ್ಲಿ ನಡೆದ ಪಂಚನಾಮೆಯನ್ನು ಅಲ್ಲಗಳೆದಿರುತ್ತಾರೆ.

16. ಫ್ರಾಸಾ-3 ರವರು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯುತ್ತಾ, 12.12.2017 ಸಂಜೆ 06.30 ತಾನು, ತನ್ನ ತಮ್ಮ, ತನ್ನ ತಂದೆ ತಾಯಿ ಶೆಂಗಾ ಕಾಳು ಒಡೆಯುತ್ತಿದ್ದೆವು ಪಡಸಾಲೆಯಲ್ಲಿ ಇದ್ದೆವು, ತಾನು ಮುಖತೊಳೆಯಲು ಹೊರಗೆ ಹೋದೆ ಆಗ ಏಕಾಏಕಿಯಾಗಿ ಆರೋಪಿ ಬಂದು ಗ್ವಾರೆ ತೆಗೆದುಕೊಂಡು ತಲೆಗೆ ಹೊಡೆದರು ಆಗ ತನಗೆ ರಕ್ತ ಬಂದಿದ್ದು, ತನ್ನ ತಮ್ಮ ಓಡಿ ಬಂದ ಅವನಿಗೂ ಹೊಡೆಯಲು ಹೋದ, ತನ್ನ ತಂದೆಗೂ ಹೊಡೆದರು, ತನ್ನ ತಂದೆಗೆ ರಕ್ತ ಬಂದಿದ್ದು,

ಶಿವನಗೌಡ, ಬಸವರಾಜ, ಮಾಂತೇಶಗೌಡ, ತನ್ನ ತಮ್ಮ, ಮಂಜುನಾಥ ಬಂದು ತನ್ನನ್ನು ಬಿಡಿಸಿದರು ಆರೋಪಿ ತಮಗೆ ಜೀವದ ಬೆದರಿಕೆ ಹಾಕಿದರು. ಬಂಕಾಪುರ ಸರಕಾರಿ ದವಾಖಾನೆಗೆ ಹೋದೇವು ಎಂದು ತಮ್ಮ ಸಾಕ್ಷ್ಯವನ್ನು ನುಡಿದಿರುತ್ತಾರೆ.

17. ಸದರಿ ಸಾಕ್ಷಿದಾರರನ್ನು ಪಾಟೀ ಸವಾಲಿಗೆ ಗುರಿಪಡಿಸಿದಾಗ ತಮ್ಮ ಪಾಟೀ ಸವಾಲಿನಲ್ಲಿ ನನ್ನ ಗಂಡನ ಊರು ಕುಂದುರಾರು. ಈ ಘಟನೆ ಆದಾಗ ನನ್ನ ಮದುವೆ ಆಗಿರಲಿಲ್ಲ. ನನ್ನ ಗಂಡನ ಹೆಸರು ಪರಮೇಶ್ವರ ಹಾನಗಲ್ ಇರುತ್ತದೆ. ಆರೋಪಿ ನನ್ನ ಗಂಡನಿಗೆ ದೂರದ ಸಂಬಂಧಿಕರು ಆಗಬೇಕು. ಶಿವಾನಂದ/ಚಾಸಾ.10 ನನ್ನ ಕಾಕಾನ ಮಗ ನನಗೆ ತಮ್ಮ ಆಗಬೇಕು. ಘಟನೆ ಆದಾಗ ನನ್ನ ತದೆ ತಾಯಿ ತಮ್ಮ ಮತ್ತು ನಾನು ಶೆಂಗಾ ರಾಶಿ ಒಡೆಯುತ್ತಿದ್ದೆವು. ನಮ್ಮನ್ನು ಹೊರತುಪಡಿಸಿ ಯಾವುದೇ ಆಳುಗಳು ಇರಲಿಲ್ಲ ಎಂದರೆ ಸರಿ. ಚಾಸಾ.1 ನನ್ನ ತಂದೆ, ಚಾಸಾ.5 ನನ್ನ ತಮ್ಮ, ಚಾಸಾ-6 ನನ್ನ ತಾಯಿ, ಚಾಸಾ.7 ನನ್ನ ಚಿಕ್ಕಪ್ಪ, ಚಾಸಾ.10 ನನ್ನ ತಮ್ಮ ಇರುತ್ತಾರೆ. ಸದರಿ ಫ್ರಾಸಾ.3 ರವರು ತಮ್ಮ ಮುಖ್ಯ ವಿಚಾರಣೆ ಮತ್ತು ಪಾಟೀ ಸವಾಲಿನಲ್ಲಿ ವ್ಯತಿರಿಕ್ತ ಸಾಕ್ಷಿ ನುಡಿದಿದ್ದು ಅವರ ಸಾಕ್ಷಿಯನ್ನು ನಂಬಲು ಕಷ್ಟವಿರುತ್ತದೆ.

18. ಫ್ರಾಸಾ-4 ರವರು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯುತ್ತಾ, ದಿಃ 12.12.2017 ಸಂಜೆ 06.30 ತಾನು, ತನ್ನ ಅಕ್ಕ, ತನ್ನ ತಂದೆ ತಾಯಿ ಶೆಂಗಾ ಕಾಳು ಒಡೆಯುತ್ತಿದ್ದೆವು ಪಡಸಾಲೆಯಲ್ಲಿ ಇದ್ದೆವು, ತನ್ನ ತಂಗಿ ಮುಖತೊಳೆಯಲು ಹೊರಗೆ ಹೋದಳು, ಆಗ ಅವಳಿಗೆ ಏಕಾಏಕಿಯಾಗಿ ಆರೋಪಿ ಬಂದು ಗ್ವಾರೆ ತೆಗೆದುಕೊಂಡು ತಲೆಗೆ ಹೊಡೆದರು ಆಗ ಅವಳಿಗೆ ರಕ್ತ ಬಂದಿದ್ದು, ತಾನು ಓಡಿ ಬಂದೆ ತನಗೂ ಹೊಡೆಯಲು ಬಂದ, ತನ್ನ ತಂದೆಗೂ ಹೊಡೆದರು, ತನ್ನ ತಂದೆಗೆ ರಕ್ತ ಬಂದಿದ್ದು, ಶಿವಪುತ್ರಪ್ಪ, ಬಸವರಾಜ, ಮಾಂತೇಶಗೌಡ, ತನ್ನ ತಮ್ಮ, ಮಂಜುನಾಥ ಬಂದು ತಮ್ಮನ್ನು ಬಿಡಿಸಿದರು ಆರೋಪಿ ತಮಗೆ ಜೀವದ ಬೆದರಿಕೆ ಹಾಕಿದರು. ಬಂಕಾಪುರ ಸರಕಾರಿ ದವಾಖಾನೆಗೆ ಹೋದೇವು ಎಂದು ತಮ್ಮ ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಪಾಟೀ ಸವಾಲಿಗೆ ಗುರಿಪಡಿಸಿದಾಗ ತಮ್ಮ ಪಾಟೀ ಸವಾಲಿನಲ್ಲಿ ನಾನು, ನನ್ನ ತಾಯಿ, ತಂದೆ, ಅಕ್ಕ ಸೇರಿ ಶೇಂಗಾ ಒಡೆಯುತ್ತಿದ್ದೆವು. ಬೇರೆ ಆಳುಗಳನ್ನು ತೆಗೆದುಕೊಂಡಿರಲಿಲ್ಲ. ಶೇಂಗಾದ ರಾಶಿಯನ್ನು ಮನೆಯಲ್ಲಿ ಹಾಕುತ್ತಿದ್ದೆವು. ದಿಃ13.12.2017 ರಂದು ಹೇಳಿಕೆಯನ್ನು ನೀಡಿರುತ್ತೇನೆ. ಶಿವಾನಂದ ಮೆಳ್ಳಾಗಟ್ಟಿಯವರು ಬರೆದುಕೊಂಡಿದ್ದಾರೆ. ಹೇಳಿಕೆ ಬರೆಯಲು ನಮ್ಮವರೆಲ್ಲಾ

ಮಾಹಿತಿ ಕೊಟ್ಟರು. ಹೇಳಿಕೆಯನ್ನು ಓದಿ ನೋಡಿ ಸಹಿ ಮಾಡಿಕೊಟ್ಟಿದ್ದೇನೆ. ಮಂಜುನಾಥ/ಆರೋಪಿ ನಮ್ಮ ಮನೆತನಕ್ಕೆ ಪರಿಚಯಸ್ಥ ಎಂದರೆ ಸರಿ. ಚಾಸಾ.1 ನನ್ನ ತಂದೆ, ಚಾಸಾ.4 ನನ್ನ ಅಕ್ಕ, ಚಾಸಾ.5 ರಿಂದ ಚಾಸಾ.9 ರವರು ನನ್ನ ಮಾವಂದಿರು ಎಂದರೆ ಸರಿ. ಘಟನೆ ನಡೆದಾಗ ಇವರನ್ನು ಹೊರತುಪಡಿಸಿ ಊರ ಜನರು ಹಾಜರು ಇದ್ದರು ಎಂದರೆ ಸರಿ. ನನ್ನ ದೊಡ್ಡಪ್ಪ ಗಲಾಟೆ ಕೇಳಿ ಬಂದಿದ್ದಾರೆ ಎಂದು ನುಡಿದಿರುತ್ತಾರೆ. ಫ್ರಾಸಾ.4 ರವರ ಸಾಕ್ಷಿಯನ್ನು ಗಮನಿಸಿದಾಗ ಚಾಸಾ.1 ನನ್ನ ತಂದೆ, ಚಾಸಾ.4 ನನ್ನ ಅಕ್ಕ, ಚಾಸಾ.5 ರಿಂದ ಚಾಸ.9 ರವರು ಮಾವಂದಿರು ಎಂದರೆ ಸರಿ ಎಂದು ಸಾಕ್ಷಿ ನುಡಿದಿರುತ್ತಾರೆ ಹಾಗೂ ಪಾಟೀಸವಾಲಿನಲ್ಲಿ ನಡೆದ ಘಟನೆ ಬಗ್ಗೆ ಅಲ್ಲಗಳೆದಿರುವುದಿಲ್ಲ.

19. ಫ್ರಾಸಾ-5 ರವರು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯುತ್ತಾ, ದಿಃ 12.12.2017 ಸಂಜೆ 05.30 ತಾನು, ತನ್ನ ಮಕ್ಕಳು, ತನ್ನ ಗಂಡ ಶೆಂಗಾ ಕಾಳು ಒಡೆಯುತ್ತಿದ್ದೆವು ಪಡಸಾಲೆಯಲ್ಲಿ ಇದ್ದೆವು, ತನ್ನ ಮಗಳು ಮುಖತೊಳೆಯಲು ಹೊರಗೆ ಹೋದಳು, ಆಗ ಅವಳಿಗೆ ಏಕಾಏಕಿಯಾಗಿ ಆರೋಪಿ ಬಂದು ಗ್ವಾರೆ ತೆಗೆದುಕೊಂಡು ತಲೆಗೆ ಹೊಡೆದರು ಆಗ ಅವಳಿಗೆ ರಕ್ತ ಬಂದಿದ್ದು, ತನ್ನ ಮಗ ಓಡಿ

ಹೋದ ಅವನಿಗೂ ಹೊಡೆಯಲು ಬಂದ, ತನ್ನ ಗಂಡನಿಗೂ ಹೊಡೆದರು, ತನ್ನ ಗಂಡ ಯಾಕೆ ಜಗಳ ಮಾಡುತ್ತಿಯಾ ಎಂದು ಕೇಳಿದರು, ಅದಕ್ಕೆ ಅವರಿಗೂ ಹೊಡೆದರು ತನ್ನ ಗಂಡನಿಗೆ ರಕ್ತ ಬಂದಿದ್ದು, ಮಹೇಶ, ಶಿವನಗೌಡ, ಮಾಂತೇಶಗೌಡ, ಮಂಜುನಾಥ ಬಂದು ತಮ್ಮನ್ನು ಬಿಡಿಸಿದರು ಆರೋಪಿ ತಮಗೆ ಜೀವದ ಬೆದರಿಕೆ ಹಾಕಿದರು. ಬಂಕಾಪುರ ಸರಕಾರಿ ದವಾಖಾನೆಗೆ ಹೋದೇವು, ದಿಃ 13.12.2017 ರಂದು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದು ತಮ್ಮ ಸಾಕ್ಷ್ಯವನ್ನು ನುಡಿದಿರುತ್ತಾರೆ.

20. ಸದರಿ ಸಾಕ್ಷಿದಾರರನ್ನು ಪಾಟೀ ಸವಾಲಿಗೆ ಗುರಿಪಡಿಸಿದಾಗ ತಮ್ಮ ಪಾಟೀ ಸವಾಲಿನಲ್ಲಿ ಚಾಸಾ.1 ನನ್ನ ಗಂಡ, ಚಾಸಾ.4 ನನ್ನ ಮಗಳು, ಮನೆಯಲ್ಲಿ ಎಲ್ಲರೂ ಇದ್ದೆವು. ದಿಃ12.12.2017 ರಂದು 05.30 ಕ್ಕೆ ಘಟನೆ ನಡೆದಿದೆ. ಗಲಾಟೆ ನಡೆದಾಗ ಚಾಸಾ.7 ರಿಂದ ಚಾಸಾ.9 ರವರು ಹಾಜರಿದ್ದು ಅವರು ನನ್ನ ಸಬಂಧಿಕರು. ನಮ್ಮ ಮನೆ ಬಾಜು ತಗಡಿನ ಶೆಡನಲ್ಲಿ ಶೆಂಗಾ ರಾಶಿ ಹಾಕಿದ್ದೆವು. ಶೆಂಗಾ ಕಾಳನ್ನು ನಮ್ಮ ಮಕ್ಕಳು ಮತ್ತು ನಮ್ಮ ತಾಯಿ ಸೇರಿ ಶೇಂಗಾ ಆರಿಸುತ್ತಿದ್ದೇವು. ಶೇಂಗಾ ಆರಿಸಲು ಆಳುಗಳನ್ನು ತೆಗೆದುಕೊಂಡಿರಲಿಲ್ಲ. ಘಟನೆ ನಡೆದಾಗ ಸಂಜೆಯಾಗಿ

ಕತ್ತಲಾಗಿತ್ತು ಎಂದರೆ ಸರಿ. ಕತ್ತಲಾಗಿದ್ದರಿಂದ ಯಾರು ಬಂದರು ಯಾರು ಹೋದರು ಎಂದು ಗೊತ್ತಾಗುತ್ತಿರಲಿಲ್ಲ ಎಂದರೆ ಸರಿ. ಚಾಸಾ.5 ನನ್ನ ಮಗ, ಚಾಸಾ.7 ರಿಂದ ಚಾಸಾ.9 ನಮ್ಮ ಸಂಬಂಧಿಕರು ಎಂದರೆ ಸರಿ. ಫ್ರಾಸಾ.5 ರವರು ತಮ್ಮ ಪಾಟೀ ಸವಾಲಿನಲ್ಲಿ ಚಾಸಾ.1 ರವರು ನನ್ನ ಗಂಡ, ಚಾಸಾ.4 ಮತ್ತು ಚಾಸಾ.5 ರವರು ನನ್ನ ಮಕ್ಕಳು, ಚಾಸಾ.7 ರಿಂದ ಚಾಸಾ.9 ರವರು ನನ್ನ ಸಬಂಧಿಕರು ಎಂದರೆ ಸರಿ ಎಂದು ಸಾಕ್ಷಿ ನುಡಿದಿರುತ್ತಾರೆ. ತಮ್ಮ ಪಾಟೀ ಸವಾಲಿನಲ್ಲಿ ನಡೆದ ಘಟನೆ ಬಗ್ಗೆ ಅಲ್ಲಗಳೆದಿರುವುದಿಲ್ಲ.

21. ಫ್ರಾಸಾ-6 ಮತ್ತು ಫ್ರಾಸಾ-7 ರವರು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯುತ್ತಾ, ತಾವು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ಆರೋಪಿತರು ಮತ್ತು ಪಿರ್ಯಾದಿಯ ನಡುವೆ ಜಗಳ ಆದ ಬಗ್ಗೆ ತಮಗೆ ಗೊತ್ತಿಲ್ಲ. ತಾವು ಯಾವುದೇ ಜಗಳ ಬಿಡಿಸಿಲ್ಲ ಎಂದು ತಮ್ಮ ಸಾಕ್ಷ್ಯವನ್ನು ನುಡಿದಿರುತ್ತಾರೆ. ಫ್ರಾಸಾ-8 ರವರು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯುತ್ತಾ, ಚಾಸಾ.1 ನನ್ನ ಅಣ್ಣ, ಚಾಸಾ.4 ನನ್ನ ಅಣ್ಣನ ಮಗಳು, ಚಾಸಾ.5 ನನ್ನ ಅಣ್ಣನ ಮಗ, ಚಾಸಾ.6 ಅತ್ತಿಗೆ, ಚಾಸಾ.9 ನನ್ನ ಅಣ್ಣ, ಚಾಸಾ.10 ನನ್ನ ಮಗ ಇರುತ್ತಾರೆ ತಾನು ಪೋಲಿಸರ ಮುಂದೆ

ಯಾವುದೇ ಹೇಳಿಕೆ ನೀಡಿಲ್ಲ. ಆರೋಪಿತರು ಮತ್ತು ಪಿರ್ಯಾದಿಯ ನಡುವೆ ಜಗಳ ಆದ ಬಗ್ಗೆ ತನಗೆ ಗೊತ್ತಿಲ್ಲ. ತಾನು ಯಾವುದೇ ಜಗಳ ಬಿಡಿಸಿಲ್ಲ ಎಂದು ತಮ್ಮ ಸಾಕ್ಷಿಯನ್ನು ನುಡಿದಿರುತ್ತಾರೆ. ಸದರಿ ಸಾಕ್ಷಿದಾರರು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಸಹಾಯಕ ಸರ್ಕಾರಿ ಅಭಿಯೋಜಕರವರಿಗೆ ಪಾಟೀ ಸವಾಲಿಗೆ ಅನುಮತಿ ನೀಡಿದಾಗ ತಮ್ಮ ಪಾಟೀ ಸವಾಲಿನಲ್ಲಿ ಪ್ರಕರಣದ ಕಡತಕ್ಕೆ ಸಂಬಂಧಿಸಿದಂತೆ ಸೂಚಿಸಿದ ಎಲ್ಲಾ ಸೂಚನೆಗಳನ್ನು ನಿರಾಕರಿಸಿದ್ದು ತಾವು ಯಾವುದೇ ಘಟನೆ ನಡೆದಿಲ್ಲ ಎಂದು ನುಡಿದಿರುತ್ತಾರೆ.

22. ಪ್ರಾಸಾ-9 ರವರು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯುತ್ತಾ, ಚಾಸಾ.1 ನನ್ನ ದೊಡ್ಡಪ್ಪ, ಚಾಸಾ.4 ನನ್ನ ಅಕ್ಕ, ಚಾಸಾ.5 ನನ್ನ ಅಣ್ಣ, ಚಾಸಾ.6 ಚಿಕ್ಕಮ್ಮ, ಚಾಸಾ.8 ತಂದೆ, ಚಾಸಾ.9 ನನ್ನ ದೊಡ್ಡಪ್ಪ ಇರುತ್ತಾರೆ. ತಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ಆರೋಪಿತರು ಮತ್ತು ಪಿರ್ಯಾದಿಯ ನಡುವೆ ಜಗಳ ಆದ ಬಗ್ಗೆ ತಮಗೆ ಗೊತ್ತಿಲ್ಲ. ತಾನು ಯಾವುದೇ ಜಗಳ ಬಿಡಿಸಿಲ್ಲ. ತಾನು ದೂರು ಬರೆದು ಕೊಟ್ಟಿಲ್ಲ. ನಿಪಿ.1 ರಲ್ಲಿ ಏನು ಇದೆ ಎಂದು ಗೊತ್ತಿಲ್ಲ ಎಂದು ತಮ್ಮ ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿ ಸಾಕ್ಷಿದಾರರು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ

ನುಡಿದಿದ್ದರಿಂದ ಸಹಾಯಕ ಸರ್ಕಾರಿ ಅಭಿಯೋಜಕರವರಿಗೆ ಪಾಟೀ ಸವಾಲಿಗೆ ಅನುಮತಿ ನೀಡಿದಾಗ ತಮ್ಮ ಪಾಟೀ ಸವಾಲಿನಲ್ಲಿ ಪ್ರಕರಣದ ಕಡತಕ್ಕೆ ಸಂಬಂಧಿಸಿದಂತೆ ಸೂಚಿಸಿದ ಎಲ್ಲಾ ಸೂಚನೆಗಳನ್ನು ನಿರಾಕರಿಸಿದ್ದು ತಾವು ಯಾವುದೇ ಘಟನೆ ನಡೆದಿಲ್ಲ ಎಂದು ನುಡಿದಿರುತ್ತಾರೆ.

23. ಹೀಗೆ ಈ ಪ್ರಕರಣದಲ್ಲಿ ಮೂಲ ಮತ್ತು ದಾಖಲೆಗಳ ಅನುಗಣವಾಗಿ ಪರಸ್ಪರ ಯಾವುದೆ ಸಂಬಂಧ ಇರುವುದಿಲ್ಲ ಮತ್ತು ತರ್ಕದಿಂದ ಬೇರೆ ಎಂದು ಕಂಡುಬರುತ್ತದೆ. ಹೀಗೆ ಈ ಪ್ರಕರಣದಲ್ಲಿ ಕೆಲವು ಸಾಕ್ಷಿದಾರರು ಅಭಿಯೋಜನೆಗೆ ವಿರುದ್ಧವಾಗಿ ನುಡಿದಿದ್ದು, ತಪ್ಪಿನ ಊಹೆಯನ್ನು ಆಧರಿಸುವ ಸಂದರ್ಭಗಳನ್ನು ದೃಢವಾಗಿ ಮತ್ತು ನಿಖರವಾಗಿ ಸಿದ್ಧ ಪಡಿಸಲು ವಿಫಲರಾಗಿರುತ್ತಾರೆ.

24. ಆದ್ದರಿಂದ ನ್ಯಾಯಾಲಯದ ಮುಂದೆ ಆರೋಪಿತನು ಅಪರಾಧ ಮಾಡಿದ ಬಗ್ಗೆ ಯಾವುದೇ ನೇರ ಅಥವಾ ಸಾಂದರ್ಭಿಕ ಸಾಕ್ಷ್ಯಾಧಾರಗಳು ಕಂಡು ಬಂದಿರುವುದಿಲ್ಲ. ಇದರಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶಗಳು ಏನೆಂದರೆ, ಅಭಿಯೊೀಜನೆಯು, ಘಟನೆಯು ನಡೆದ ಬಗ್ಗೆ ಆರೋಪಿತನ ಮೇಲೆ

ಹೊರಿಸಲಾದ ಆರೋಪ ಪಟ್ಟಿಯ ಯಾವುದೇ ಅಂಶವನ್ನು ಅಭಿಯೋಜನೆಯು ಸಾಭೀತುಪಡಿಸಿರುವುದಿಲ್ಲ.

25. ಒಂದು ಅಪರಾದ ರುಜುವಾತುವಾಗಬೇಕಾದರೆ ಮೌಖಿಕ ಸಾಕ್ಷ್ಯ ಮತ್ತು ಕಡತದಲ್ಲಿ ಲಭ್ಯವಿದ್ದ ದಾಖಲಾತಿಗಳು ಸಾಕ್ಷ್ಯಗಳು ಸಂಪೂರ್ಣವಾಗಿ ಅಪರಾಧಿತ್ವವನ್ನು ಬೆಂಬಲಿಸಬೇಕು. ಈ ಪ್ರಕರಣದಲ್ಲಿ ಫ್ರಾಸಾ-1 ದೂರುದಾರರು ಫ್ರಾಸಾ-3 ರಿಂದ ಫ್ರಾಸಾ-5 ರವರು ಪ್ರತ್ಯಕ್ಷದರ್ಶಿಗಳು ತಮ್ಮ ಸಾಕ್ಷಿಯಲ್ಲಿ ಘಟನೆಯ ಬಗ್ಗೆ ಅಲ್ಲಗಳೆಯುವುದಿಲ್ಲ. ಫ್ರಾಸಾ-6 ಮತ್ತು ಫ್ರಾಸಾ-7 ರವರು ಈ ಪ್ರಕರಣದ ಪ್ರತ್ಯಕ್ಷದರ್ಶಿಗಳಾಗಿದ್ದು ವ್ಯತಿರಿಕ್ತ ಸಾಕ್ಷಿ ನುಡಿದು ಅಭಿಯೋಜಕರ ಪ್ರಕರಣಕ್ಕೆ ಪುಷ್ಟೀಕರಿಸುವುದಿಲ್ಲ. ಸದರಿ ಪ್ರಕರಣದಲ್ಲಿ ಫ್ರಾಸಾ-1, ಫ್ರಾಸಾ-3 ರಿಂದ ಫ್ರಾಸಾ-8 ರವರು ಸಂಬಂಧಿಕರಿದ್ದು ಫ್ರಾಸಾ-1 ರವರ ಹೆಂಡತಿ ಫ್ರಾಸಾ-4, ಫ್ರಾಸಾ-2 ಮಗಳ ಆಗಬೇಕು ಇದರಲ್ಲಿ ಫ್ರಾಸಾ-1, ಫ್ರಾಸಾ-3 ರಿಂದ ಫ್ರಾಸಾ-5 ರವರು ಹಿತಾಸಕ್ತಿವುಳ್ಳ ಸಾಕ್ಷಿದಾರರಾಗಿರುತ್ತಾರೆ. ಫ್ರಾಸಾ-1, ಫ್ರಾಸಾ-3 ರಿಂದ ಫ್ರಾಸಾ-5 ರವರು ನುಡಿದ ಸಾಕ್ಷಿಗೆ ಪುಷ್ಟೀಕರಿಸುವಂತಹ ಯಾವುದೇ ಸ್ವಾತಂತ್ರ ಸಾಕ್ಷಿಗಳು ಲಭ್ಯವಿರುವುದಿಲ್ಲ ಹಾಗೂ ಸದರಿ ಪ್ರಕರಣದ ಪ್ರತ್ಯಕ್ಷದರ್ಶಿಗಳಾದ ಫ್ರಾಸಾ-6 ಮತ್ತು ಫ್ರಾಸಾ-7 ರವರು

ವ್ಯತಿರಿಕ್ತ ಸಾಕ್ಷಿ ನುಡಿದಿದ್ದು ಅಭಿಯೋಜನೆಯ ಪ್ರಕರಣಕ್ಕೆ ಪುಷ್ಟೀಕರಿಸುವುದಿಲ್ಲ. ಅಂತಹ ಸಂದರ್ಭದಲ್ಲಿ ಅನುಮಾನದ ಲಾಭವನ್ನು ಆರೋಪಿಯು ಪಡೆಯುವಲ್ಲಿ ಅರ್ಹನಿರುತ್ತಾನೆ. ಒಟ್ಟಾರೆಯಾಗಿ ಫ್ರಾಸಾ-1 ರಿಂದ ಫ್ರಾಸಾ-9 ರವರು ನುಡಿದ ಸಾಕ್ಷ್ಯವನ್ನು ಗಮನಿಸಿದಾಗ ಒಂದಕ್ಕೊಂದು ಹೊಂದಾಣಿಕೆ ಇರುವುದಿಲ್ಲ. ಆ ಕಾರಣ ಈ ನ್ಯಾಯಾಲಯಕ್ಕೆ ಸ್ಪಷ್ಟವಾಗಿ ಕಂಡು ಬರುವುದೇನೆಂದರೆ, ಆರೋಪಿತನು ಯಾವುದೇ ತಪ್ಪು ಮಾಡಿರುವುದಿಲ್ಲ ಎಂದು ಕಂಡು ಬರುತ್ತದೆ. ಆದ್ದರಿಂದ ಅಭಿಯೋಜನೆಯ ಅಂಶಗಳನ್ನು ಪೂರಕ ಸಾಕ್ಷ್ಯಾಧಾರಗಳ ಅನುಪಸ್ಥಿತಿಯಲ್ಲಿ ಅಭಿಯೋೀಜನೆಯು ತನ್ನ ನಿಲುವನ್ನು ಸಾಭೀತು ಪಡಿಸಲು ಯಾವುದೇ ಮಹತ್ವದ ಸಾಕ್ಷ್ಯವನ್ನು ನ್ಯಾಯಲಯದ ಮುಂದೆ ಹಾಜರು ಪಡಿಸಿರುವುದಿಲ್ಲ. ಆರೋಪಿತನು ತಪಿತಸ್ಥನು ಎಂಬ ಬಗ್ಗೆ ಯಾವುದೇ ಪೂರಕ ಸಾಕ್ಷ್ಯಾಧಾರಗಳು ನ್ಯಾಯಲಯದ ಮುಂದೆ ಲಭ್ಯ ಇರುವುದಿಲ್ಲ. ಕಾರಣ ಪೂರಕ ಸಾಕ್ಷ್ಯಾಧರಗಳ ಅನುಪಸ್ಥಿತಿಯಲ್ಲಿ ಅಭಿಯೋಜನೆಯ ನಿಲುವನ್ನು ನಂಬಲು ಕಷ್ಟಸಾಧ್ಯವಾಗ್ತುದೆ.

26. ಅಭಿಯೋಜನೆಯು ಅಪರಾಧದ ಸ್ಪಷ್ಟವಾಗಿ ಮತ್ತು ನಿಖರವಾಗಿ ಸಿದ್ಧಪಡಿಸಲು ವಿಫಲವಾಗಿದೆ. ಅಭಿಯೋಜಕರ ಪ್ರಕರಣವನ್ನು ಪುಷ್ಟಿಕಸುವಂತಹ

ಸ್ವತಂತ್ರ ಸಾಕ್ಷಿಯು ಹಾಗೂ ಮಹತ್ವದ ಸಾಕ್ಷಿಯು ಲಭ್ಯವಿರುವುದಿಲ್ಲ. ಆದ್ದರಿಂದ ಆರೋಪಿತರಿಗೆ ಸಂಶಯದ ಬೆಳಕಿನ ಲಾಭವನ್ನು ಕೊಡುವುದು ಸೂಕ್ತ ಎಂದು ತೀರ್ಮಾನಿಸಿ, ಈ ಮೇಲೆ ಹೇಳಿದ ಅಂಶ ನಂಃ1 ರಿಂದ 5 ನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.

27. ಅಂಶ ನಂ.6:- ಈ ಮೇಲಿನ ಅಂಶ ನಂ.1 ರಿಂದ 5 ರಲ್ಲಿ ವಿವರಿಸಿದ ಕಾರಣಗಳಿಂದ ಹಾಗೂ ನಾನು ಹೊಂದಿದ ನಿಖರ ಮತ್ತು ಖಚಿತ ಅಭಿಪ್ರಾಯದ ಮೇರೆಗೆ ಈ ಕೆಳಗಿನಂತೆ ಆದೇಶ ಮಾಡಿರುತ್ತೇನೆಃ

## ಆ ದೇ ಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಆರೋಪಿತನನ್ನು ಭಾರತ ದಂಡ ಸಂಹಿತೆ ಕಲಂ. 324, 354, 447, 504 ಮತ್ತು 506 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮುಕ್ತಗೊಳಿಸಿ ನಿರ್ದೋಷಿಗಳು ಎಂದು ತೀರ್ಮಾನಿಸಿ ಬಿಡುಗಡೆಗೊಳಿಸುತ್ತಿದ್ದೇನೆ.

KAHV700000752018



ತೀರ್ಪು

ಸದರಿ ಪ್ರಕರಣದಲ್ಲಿ ಮು.ಮಾ.1 ಜಪ್ತು ಪಡಿಸಿದ್ದು, ಗ್ವಾರೆ (ಸಲಿಕೆ) ಇದ್ದು ಅದನ್ನು ಅಪೀಲು ಅವಧಿ ಮುಗಿದ ನಂತರ ಕಾನೂನಿನ ಪ್ರಕಾರ ವಿಲೇವಾರಿ ಮಾಡತಕ್ಕದ್ದು.

ಆರೋಪಿತನು ಮತ್ತು ಜಾಮೀನುದಾರರು ಬರೆದು ಕೊಟ್ಟ ಮುಚ್ಚಳಿಕೆ ಪತ್ರವು ಅಫೀಲು ವ್ಯವಹರಣೆ ಕಾಲಾವಧಿ ಮುಗಿದ ನಂತರ ರದ್ದುಗೊಳ್ಳತಕ್ಕದ್ದು.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮುಖಾಂತರ ಉಕ್ತಲೇಖನ ನೀಡಿದ ನಂತರ ತಿದ್ದಿ ತರ್ಜುಮೆ ಮಾಡಿ ನನ್ನ ಸಹಿಯೊಂದಿಗೆ ತೆರೆದ ನ್ಯಾಯಾಲಯಲ್ಲಿ ದಿನಾಂಕ 18 ನೇ ಜುಲೈ - 2026 ರಂದು ಘೋಷಿಸಲಾಯಿತು).

(ಅಶ್ವಿನಿಚಂದ್ರಕಾಂತ್)
ದಿವಾಣಿ ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಗಳ ನ್ಯಾಯಾಲಯ, ಶಿಗ್ಗಾಂವ.

## ಅನುಬಂಧ

**ಅಭಿಯೋಜನೆ ಪರ ವಿಚಾರಣೆ ಮಾಡಿದ ಸಾಕ್ಷಿಗಳುಃ**

ಫ್ರಾಸಾ-1 - ಚಂದ್ರಶೇಖರಪ್ಪ ಬಸವಣ್ಣೆಪ್ಪ ಮೆಳ್ಳಗಟ್ಟಿ

ಫ್ರಾಸಾ-2 - ಮಾಲತೇಶಗೌಡ

ಫ್ರಾಸಾ-3 - ಕವಿತಾ ಮೆಳ್ಳಾಗಟ್ಟಿ

ಫ್ರಾಸಾ-4 - ಈಶ್ವರ ಚಂದ್ರಶೇಖರಪ್ಪ ಮೆಳ್ಳಾಗಟ್ಟಿ

ಫ್ರಾಸಾ-5 - ಕುಸುಮಾ ಚಂದ್ರಶೇಖರಪ್ಪ ಮೆಳ್ಳಾಗಟ್ಟಿ

ಫ್ರಾಸಾ-6 - ಶಿವನಗೌಡ ಗಿರಿಯಪ್ಪಗೌಡ

ಫ್ರಾಸಾ-7 - ಸಿದ್ದಪ್ಪ ಮೆಳ್ಳಾಗಟ್ಟಿ

ಫ್ರಾಸಾ-8 - ಶಿವಪುತ್ರಪ್ಪ ಮೆಳ್ಳಾಗಟ್ಟಿ

ಫ್ರಾಸಾ-9 - ಶಿವಾನಂದ ಮೆಳ್ಳಾಗಟ್ಟಿ

ಆರೋಪಿತರ ಪರ ವಿಚಾರಣೆ ಮಾಡಿದ ಸಾಕ್ಷಿಗಳುಃ

- ಇಲ್ಲಾ -

ಅಭಿಯೋಜನೆ ಪರ ಗುರುತಿಸಲಾದ ದಾಖಲೆಗಳುಃ

ನಿ.ಪಿ.1 - ದೂರು

ನಿ.ಪಿ.1(ಎ) - ಫ್ರಾಸಾ-1 ರವರ ಸಹಿ

ನಿ.ಪಿ.1(ಬಿ) - ಫ್ರಾಸಾ-9 ರವರ ಸಹಿ

ನಿ.ಪಿ.2 - ಘಟನಾ ಸ್ಥಳದ ಪಂಚನಾಮೆ

ನಿ.ಪಿ.2(ಎ) - ಫ್ರಾಸಾ-2 ರವರ ಸಹಿ

ನಿ.ಪಿ.3 - ಫ್ರಾಸಾ-6 ರವರ ಹೇಳಿಕೆ

ನಿ.ಪಿ.4 - ಫ್ರಾಸಾ-7 ರವರ ಹೇಳಿಕೆ

ನಿ.ಪಿ.5 - ಫ್ರಾಸಾ-8 ರವರ ಹೇಳಿಕೆ.

ನಿ.ಪಿ.6 - ಫ್ರಾಸಾ-9 ರವರ ಹೇಳಿಕೆ.

ಆರೋಪಿತರ ಪರ ವಿಚಾರಣೆ ಮಾಡಿದ ದಾಖಲೆಗಳುಃ

- ಇಲ್ಲಾ -

ಮುದ್ದೆಮಾಲಿನ ಪಟ್ಟಿ:-

ಮು.ಮಾ.1 - ಒಂದು ಗ್ವಾರೆ.

**Sd/-**

(ಅಶ್ವಿನಿಚಂದ್ರಕಾಂತ್)
ದಿವಾಣಿ ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಗಳ ನ್ಯಾಯಾಲಯ, ಶಿಗ್ಗಾಂವ.